9

# ಯೇಸುವಿನಲ್ಲಿ ಪುನಃ ಸೇರಿಕೊಳ್ಳುವುದು

## (1 ಥೆಸಲೊನೀಕ 4:13-18)

ಯೇಸು ತಿರಗಿ ಬರುವನು! ಅದು ಆಶ್ಚರ್ಯವೇ? ಬಹುಶಃ ಇರುವದಿಲ್ಲ. ಇದು ಯೇಸುವಿನ ಶುಭ ಸಂದೇಶದ ಮೂಲ ಪಾಠವಾಗಿದೆ. ಒಂದು ವೇಳೆ, "ಯೇಸು ಈ ದಿನವೇ ಹಿಂದಿರುಗುತ್ತೇನೆ!" ಎಂದು ಹೇಳಿದ್ದರೆ, ಪ್ರಾಯಶಃ ಈ ಹೇಳಿಕೆಯು ಬಲವಾದ ಪ್ರತಿಕ್ರಿಯೆಯನ್ನು ಉಂಟುಮಾಡಬಹುದಿತ್ತು, ಅದರಲ್ಲಿ ಭಯ, ಅಸಹಜತೆ, ಅಥವಾ ಸಂತೋಷದ ಕಾರಣವೂ ಇರಬಹುದು.

ಯೇಸುವಿನ ಪುನರಾಗಮನ, 1 ಥೆಸಲೊನೀಕದ ಮುಖ್ಯ ಪ್ರಸ್ತಾಪವಾಗಿರುತ್ತದೆ. ಅದನ್ನು ಪ್ರತಿಯೊಂದು ಅಧ್ಯಾಯದಲ್ಲೂ ತಿಳಿಸಲಾಗಿದೆ. ಈ ದಿನಗಳಲ್ಲಿ ಯೇಸುವಿನ ಪುನರಾಗಮನದ ಸಂದೇಶವನ್ನು ಪದೇ ಪದೇ ಬೋಧಿಸಲಾಗುತ್ತಿದೆ, ಬಹುಶಃ ಜನರು ಈ ವಿಷಯವನ್ನು ನಂಬುವದಿಲ್ಲವೆಂದು ತಿಳಿದು, ಇದನ್ನು ಮಾಡುತ್ತಿರಬಹುದು. ನಂಬುವವರು ಸಹ ಯೋಗ್ಯವಾದ ಜೀವಿತವನ್ನು ಜೀವಿಸುತ್ತಿರುವದಿಲ್ಲ, ಯೇಸುವಿನ ಪುನರಾಗಮನದಲ್ಲಿ ಉಂಟಾಗುವ ಪರಿಣಾಮಗಳ ಕುರಿತು ಬೋಧಿಸುವ ಹೊಣೆಯು ನಮ್ಮದಾಗಿರುವದರಿಂದ, ಅವರುಗಳು ತಮ್ಮದೇ ಆದ ಜೀವನವನ್ನು ಜೀವಿಸದಂತೆ ಎಚ್ಚರಿಸಬೇಕು.

ಈ ಯಾವುದೇ ಕಾರಣಗಳ ನಿಮಿತ್ತ ಈ ಪತ್ರದಲ್ಲಿ ಯೇಸುವಿನ ಪುನರಾಗಮನದ ಚರ್ಚೆಯನ್ನು ಮಾಡುತ್ತಿರುವದಿಲ್ಲ, ಈ ಪುಸ್ತಕವನ್ನು ಯಾರಿಗೆ ಬರೆಯಲಾಗಿದೆಯೋ, ಆ ಕ್ರೈಸ್ತರು ಈಗಾಗಲೇ ಯೇಸುವಿನ ಬರೋಣದ ಬಗ್ಗೆ ಅರಿತಿದ್ದರು. ಆತನ ಬರೋಣದ ವಿಷಯಗಳನ್ನು ಕೇಳಿ ಅವರು ಕ್ರೈಸ್ತರಾಗಿದ್ದರು; ಮತ್ತು ಕ್ರಿಸ್ತನನ್ನು ಸಂಧಿಸಲು ಸಿದ್ಧರಾಗಿದ್ದರು. ಆತನ ಬರೋಣದಲ್ಲಿ ಅವರು ಯೇಸುವಿನೊಂದಿಗೆ ಪುನಃ ಸೇರಿಕೊಳ್ಳುವವರಿದ್ದರು, ಮತ್ತು ಇತರ ಕಡೆಗಳಲ್ಲಿರುವ ಸಹೋದರರನ್ನು ಸಂಧಿಸುವವರಿದ್ದರು.

ಹೇಗೂ, ಅವರು ಯೇಸುವಿನ ಆಗಮನದ ಕುರಿತು ಯೋಚಿಸುವಾಗ, ಅವರ ಮನಸ್ಸಿನಲ್ಲಿ ಒಂದು ಸಂದೇಹವು ಉದ್ಭವಿಸಿತ್ತು. ಈಗಾಗಲೇ ಮರಣಹೊಂದಿದವರ ಅಂತ್ಯವೇನು? ಅವರು ಈ ಮಹಾ ಸಂಧಿಸುವಿಕೆಯನ್ನು ಕಳೆದುಕೊಳ್ಳುವರೇ? ಈ ಚಿಂತಾಜನಕವಾದ ಪ್ರಶ್ನೆಗೆ, ಪೌಲನು ಈ ಅಧ್ಯಾಯದ ಕೊನೆಯಲ್ಲಿ ಉತ್ತರಿಸಿರುವನು. ಅದರ ಪ್ರತಿಫಲವಾಗಿ, ಅವರು ಯೇಸುವಿನ ಬರೋಣವನ್ನು ಸಂತೋಷದಿಂದ ಹಾರೈಸಿದ್ದರು.

ಯೇಸುವಿನ ಪುನರಾಗಮನವು ನಮಗೆ ಆನಂದವನ್ನು ಉಂಟು ಮಾಡುತ್ತಿದೆಯೇ? ನಮ್ಮ ಪ್ರತಿಕ್ರಿಯೆಯು ಏನಾಗಿರುತ್ತದೆ? ಯೇಸುವಿನ ಬರೋಣದಲ್ಲಿ ಉಂಟಾಗುವ ವಿಷಯಗಳಲ್ಲಿ ಮತ್ತು ನಮ್ಮಲ್ಲಿ ಉಂಟಾಗುವ ಮನೋಭಾವದ ಆಧಾರದಲ್ಲಿ ಇದನ್ನು ನಿರ್ಣಯಿಸುತ್ತೇವೆ.

### ಲೋಕದವರಂತೆ ನಿರೀಕ್ಷೆ ಇಲ್ಲದವರಾಗಿರಬೇಡಿ (4:13)

"ನಿದ್ರೆ ಹೊಂದಿದವರ" ಬಗ್ಗೆ ಥೆಸಲೊನೀಕದವರು ಚಿಂತನೆ ಮಾಡುತ್ತಿದ್ದರು. ಲಾಜರನ ಮರಣದ ನಂತರ, ಮರಣವನ್ನು "ನಿದ್ರೆಗೆ" ಹೋಲಿಸಲಾಗಿದೆ (ಯೋಹಾನ 11:11-14). ಜೀವಿತದ ಕಾರ್ಯಗಳ ಕುರಿತು ಮನಸ್ಸು ಕಾರ್ಯ ನಿರ್ವಹಿಸಿದ ಪರಿಸ್ಥಿತಿಯ ಹೋಲಿಕೆ ಆದಾಗ್ಯೂ, ಈ ಕ್ರೈಸ್ತರು ನಿದ್ರೆ ಹೋದ ಸಹೋದರರ ಕುರಿತು ಚಿಂತಕರಾಗಿದ್ದರು.

ಮರಣವು ಅಂತ್ಯಾವಸ್ಥೆ ಎಂದು ಅನೇಕರು ನಂಬಿರುತ್ತಾರೆ - ಜೀವಿತದ ಅಂತ್ಯವಾ

ಗಿರುವದರಿಂದ ಸಂಬಂಧದ ಆಶೀರ್ವಾದದ, ಮತ್ತು ಆದಾಯದ ಅಂತ್ಯವೆಂದು ನಂಬುತ್ತಾರೆ. ಈ ಜೀವಿತದಿಂದ ಮುಂದೆ ಅದು ಮುಂದುವರಿಯುವದು ಎಂಬ ನಿರೀಕ್ಷೆಯನ್ನು ಹೊಂದಿರುವದಿಲ್ಲ. ಅದು ಮರಣದಲ್ಲಿ ಅಂತ್ಯವಾಯಿತು ಎಂದು ತಿಳಿದಿದ್ದಾರೆ. ಪೌಲ ಮತ್ತು ಅವನ ಸಹಚರರು, ಕ್ರೈಸ್ತತ್ವದ ಲಾಭವೆಲ್ಲವೂ ಮರಣದಲ್ಲಿಯೇ ಅಂತ್ಯ ವಾಗುವದಿಲ್ಲ ಎಂದು ಅರಿತಿದ್ದರು (4:13), ಅದು ಆಶೀರ್ವಾದದ ಸಮಯದ ಆರಂಭ ಮತ್ತು ನಿತ್ಯತ್ವದ ಲಾಭದ ಆರಂಭವಾಗಿದೆ.

ಈಗಾಗಲೇ ಸತ್ತು ಹೋಗಿರುವವರು, ಯೇಸುವಿನ ಪುನರಾಗಮನದಲ್ಲಿ ದೊರಕುವ ಸಕಲ ಲಾಭಗಳನ್ನು ಕಳಕೊಂಡಿದ್ದರು ಎಂದು ಥೆಸಲೊನೀಕದ ಕ್ರೈಸ್ತರು ತಿಳಿದಿದ್ದರು, ಆದದರಿಂದ ಪತ್ರಿಕೆಯ ಈ ಭಾಗದಲ್ಲಿ ಮರಣದ ನಂತರದ ಜೀವಿತದ ಕುರಿತು ಬರೆಯಲಾಗಿದೆ. ಆದ್ದರಿಂದ ಕ್ರೈಸ್ತರು ಇಹಲೋಕದವರಂತೆ, ನಿರೀಕ್ಷೆ ಇಲ್ಲದವರಾಗಿಬಾರದು.

ಮರಣವು ದುಃಖದ ಸಮವೆಂಬ ಪ್ರಖ್ಯಾತವಾದ ಹೇಳಿಕೆಯು ಜನರಲ್ಲಿದೆ. ನಾವು ಈ ರೀತಿಯಾಗಿ ಪ್ರತಿಕ್ರಿಯೆ ನೀಡಬಾರದು, ಯಾಕಂದರೆ ನಮಗೆ ಯೇಸುವಿನಲ್ಲಿ ನಿರೀಕ್ಷೆ ಇದೆ.

## ಜೀವಿತವು ಮರಣವನ್ನು ಹಿಂಬಾಲಿಸುತ್ತ ಇರುವದರಿಂದ, ದುಃಖಿಸಬೇಡಿರಿ (4:14)

"ಯೇಸುವಿನಲ್ಲಿ ನಿದ್ರೆ ಹೋದರು" ಎಂಬದು, ಆಶ್ಚರ್ಯಕರವಾದ ಉತ್ತೇಜನವಾಗಿದೆ. ಮರಣ ಹೊಂದಿದವರ ಕುರಿತು ದೇವರು ಚಿಂತಿಸುವವನು, ಅವರ ಬಗ್ಗೆ ಸಹಾನುಭೂತಿಯನ್ನು ಹೊಂದಿರುವನು ಎಂದು ಥೆಸಲೊನೀಕದ ಕ್ರೈಸ್ತರು ತಿಳಿದಿದ್ದರು. ಮೊದಲ ಶತಮಾನದ ಯೆಹೂದ್ಯರ ಸಂಗಡ ಮಾತನಾಡುವಾಗ, ನಂಬಿಗಸ್ತರು "ಅಬ್ರಹಾಮನ ಮಡಿಲಿನಲ್ಲಿ" ಇರುವರು ಎಂದು ತಿಳಿಸಿರುವನು. ಅದು ಯೆಹೂದ್ಯರಿಗೆ ಸಾಂತ್ವನ ಮತ್ತು ಶಾಂತಿಯನ್ನು ನೀಡುವ ಸೂಚನೆಯಾಗಿದೆ. ಮರಣ ಹೊಂದಿದವರ ಪರಿಸ್ಥಿತಿ ಏನೇ ಇರಲಿ, ಅವರು ದೇವರ ಸಮಕ್ಷಮದಲ್ಲಿದ್ದರು ಎಂದು ಥೆಸಲೊನೀಕದವರು ತಿಳಿದಿದ್ದರು.

(ವಿಮೋಚನಕಾಂಡ 3:6)ರಲ್ಲಿ "ಅಬ್ರಹಾಮನ ದೇವರು, ಇಸಾಕನ ದೇವರು, ಯಾಕೋಬನ ದೇವರು," ಎಂದು ಹೇಳಿರುವ ವ್ಯಾಖ್ಯಾನವು ನಂಬಿಗಸ್ತರಾದ ಯೆಹೂದ್ಯರು ಮರಣದ ನಂತರ ಇನ್ನೂ ಜೀವದಿಂದ ಇದ್ದರು ಎಂಬ ಸಂಕೇತವಾಗಿದೆ (ಮತ್ತಾಯ 22:32). ದೇವರು, ಜೀವಿಸಿರುವವರಿಗೆ ದೇವರಾಗಿರುವದರಿಂದ, ಅಬ್ರಹಾಮ, ಇಸಾಕ, ಮತ್ತು ಯಾಕೋಬ, ಇವರು ಇನ್ನೂ ಜೀವದಿಂದ ಇದ್ದರು ಎಂಬ ಅರ್ಥವಾಗಿದೆ, ಮತ್ತು ದೇವರು ಅವರಿಗಾಗಿ ಚಿಂತಿಸಿದನು, ಮತ್ತು ಪುನರುತ್ಥಾನದಲ್ಲಿ ಹಿಂದಿರುಗುವರು ಎಂಬ ಅರ್ಥ.

ಥೆಸಲೊನೀಕದವರು ಈಗಾಗಲೇ ಮರಣದ ನಂತರದ ಆಶೀರ್ವಾದಗಳಿಗೆ ನಿರೀಕ್ಷೆ ಎಂಬ ಕೀಲಿಯನ್ನು ಹೊಂದಿದ್ದರು; ಯೇಸುವನ್ನು ಸಂಧಿಸಲು ಯೋಜನೆಯನ್ನು ಮಾಡಿದ್ದರು! ಮರಣದ ನಂತರ ಜೀವ (4:14)! ಒಂದು ಸಾರಿ ಯೇಸು ಸಹ ಮರಣವನ್ನು ಅನುಭವಿಸಿದ್ದರೂ, ಈ ಜೀವದಿಂದ್ದನು. ಈ ಕ್ರೈಸ್ತರು ಪುನರುತ್ಥಾನದಲ್ಲಿ ನಂಬಿದ್ದರು: ದೇವರು ಯೇಸುವನ್ನು ಮರಣದಿಂದ ಎಬ್ಬಿಸಿದರ ನಿಮಿತ್ತ ದೇವರ ವಾಗ್ದಾನಗಳ ಆಶೀರ್ವಾದಗಳನ್ನು ಆನಂದಿಸಲು, ಮರಣಹೊಂದಿದ್ದ ಅವರ ಸಹೋದರ, ಸಹೋದರಿಯರು ಸಹ ಮರಣದಿಂದ ಏಳುವರು ಎಂದು ಈ ಕ್ರೈಸ್ತರು ನಂಬಿದ್ದರು!

ಮರಣವು, ನಿರೀಕ್ಷೆಯ ಅಂತ್ಯ ಎಂದು ಆಲೋಚಿಸುವಿರಾ? ಅಥವಾ ಆ ಕ್ರಿಯೆಯು ಸತ್ಯವಾಗಿದ್ದರೆ, ಏಕೆ ಕ್ರೈಸ್ತರು ಮರಣವನ್ನು ಹೊಂದಬೇಕು ಎಂದು ನಟನೆ ಮಾಡುವಿರಾ? ಮರಣದಲ್ಲಿ ನಾವು ಕಳಕೊಳ್ಳುವ ವಿಷಯದ ಕುರಿತು ಮಾತ್ರ ಯೋಚಿಸಿ, ಮರಣವನ್ನು ಭಯದಿಂದ ಎದುರುಗೊಳ್ಳುವಿರಾ? ಮರಣದ ಹಿಂದೆ ಏನಿರಬಹುದು ಎಂದು ಭಯಭ್ರಾಂತರಾಗುವಿರಾ? ಫಿಲಿಪ್ಪಿಯವರಿಗೆ, ಪೌಲನು ಬರೆದು, "ನನಗಂತು ಬದುಕುವದಂದರೆ ಕ್ರಿಸ್ತನೇ ಸಾಯುವುದು ಲಾಭವೆ"; "ಇಲ್ಲಿಂದ ಹೋಗಿಬಿಟ್ಟು ಕ್ರಿಸ್ತನ ಜೊತೆಯಲ್ಲಿರಬೇಕೆಂಬುದೇ ನನ್ನ

ಅಭಿಲಾಷೆ" (ಫಿಲಿಪ್ಪಿ 1:21, 23). ಅವನ ಅರ್ಥವೇನೆಂದರೆ, "ನಾನು ಸಾಯುವದೇ ಲೇಸು!" ಈ ರೀತಿಯಾಗಿ ನಾವುಗಳು ಮರಣವನ್ನು ತಿಳಿಯುವದಿಲ್ಲ, ಆ ಮರಣವನ್ನು ಸಂತೋಷದಿಂದ ಸ್ವೀಕರಿಸಿ, ಮರಣವನ್ನು ಅನುಭವಿಸುವದು ಕ್ರೈಸ್ತ ಪರಿಪಕ್ವತೆಯ ಶ್ರೇಷ್ಠತೆಯಾಗಿದೆ.

ಯೇಸುವಿನ ಪುನರುತ್ಥಾನದ ಮೂಲಕ, ದೇವರ ಮೇಲೆ ನಂಬಿಕೆಯನ್ನು ಇಡುವದು, ಮರಣದ ಮೇಲಿನ ಭಯವನ್ನು ನೀವಾರಣೆ ಮಾಡುತ್ತದೆ. ನಾಸ್ತಿಕರು ತಮಗಿರುವದೆಲ್ಲವನ್ನು ಕಳಕೊಳ್ಳುವ ಭ್ರಮೆಯಲ್ಲಿದ್ದು; ಮುಂದಿನ ಯಾವ ನಿರೀಕ್ಷೆಯನ್ನು ಹೊಂದಿರುವದಿಲ್ಲ, ನಂಬಿಕೆ ಇಲ್ಲದವರು ಮರಣದ ನಂತರ ಉಂಟಾಗುವ ಕಾರ್ಯಗಳ ನಿಮಿತ್ತ ಭಯ ಭ್ರಾಂತರಾ ಗಿರುವರು. ಆದರೆ ದೇವರಲ್ಲಿ ಭರವಸವಿಡುವವರು, ಈ ಲೋಕದ ಮರಣದ ನಂತರದ ಆಶೀರ್ವಾದಗಳಲ್ಲಿ ನಿಶ್ಚಯವುಳ್ಳವರು, ಮತ್ತು ಮರಣದ ನಂತರದ ಜೀವಿತಕ್ಕೆ ದೇವರಲ್ಲಿ ಭರವಸವಿಡುವರು!

## ದುಃಖಿಸಬೇಡಿರಿ, ಯೇಸುವಿನ ಪುನರಾಗಮನದಲ್ಲಿ, ಸತ್ತವರು ಪಾಲುಗಾರರಾಗುವರು (4:15, 16)

ಈಗಾಗಲೇ ಮರಣಹೊಂದಿರುವರು, ಯೇಸುವಿನ ಪುನರಾಗಮನದಲ್ಲಿ ಪಾಲು ತೆಗೆದು ಕೊಳ್ಳುವದಿಲ್ಲವೆಂದು ಯೇಸುವಿನ ಆಗಮನದ ಕಾಲದಲ್ಲಿ ಜೀವಿಸುತ್ತಿರುವವರು ಭಾವಿಸುವದಿಲ್ಲ. ಕ್ರಿಸ್ತನಲ್ಲಿ ನಿದ್ರೆ ಹೊಂದಿದವರು ಯೇಸುವಿನ ಆಗಮನದಲ್ಲಿ ಆತನೊಂದಿಗಿರುವರು (4:15, 16).

ವಚನ 15 ಮತ್ತು 16ರಲ್ಲಿ ಯೇಸುವಿನ ಆಗಮನದಲ್ಲಿ ಸಂಭವಿಸುವ ಮೂರು ಘಟನೆಗ ಳನ್ನು ನೋಡುತ್ತೇವೆ. ಮೊದಲನೆಯದಾಗಿ, ಕರ್ತನು ಪರಲೋಕದಿಂದ ಬರುವನು. ಯೇಸು ಪರಲೋಕಕ್ಕೆ ಏರಿ ಹೋದಾಗ, ಆತನ ಶಿಷ್ಯರಿಗೆ, "... ಗಲಿಲಾಯದವರೇ ನೀವು ಯಾಕೆ ಆಕಾಶದ ಕಡೆಗೆ ನೋಡುತ್ತಾ ನಿಂತಿದ್ದೀರಿ? ನಿಮ್ಮ ಬಳಿಯಿಂದ ಆಕಾಶದೊಳಕ್ಕೆ ಸೇರಿ ಸಲ್ಪಟ್ಟಿರುವ ಈ ಯೇಸು ಯಾವ ರೀತಿಯಲ್ಲಿ ಆಕಾಶದೊಳಗೆ ಹೋಗಿರುವದನ್ನು ನೀವು ಕಂಡಿರೋ ಅದೇ ರೀತಿಯಲ್ಲಿ ಬರುವನು ಎಂದು ಹೇಳಿದರು" (ಅಪೊಸ್ತಲರ ಕೃತ್ಯ 1:11). ಯೇಸು ಯಾವ ರೀತಿಯಲ್ಲಿ ಹೋದನೋ, ಅದೇ ರೀತಿಯಲ್ಲಿ ಆತನ ಪುನರಾಗಮನವನ್ನು ನಿಶ್ಚಯವಾಗಿ ತಿಳಿಸಲಾಗಿದೆ. ಥೆಸಲೊನೀಕದವರು ಇದನ್ನು ನಂಬಿದ್ದರು; ಅದು ಅವರಿಗೆ ಸಂದೇಶದ ಒಂದು ಭಾಗವು ಮತ್ತು ಕ್ರೈಸ್ತರಾಗುವದಕ್ಕೆ ಕಾರಣವು ಆಗಿತ್ತು (1:10).

ಎರಡನೆಯದಾಗಿ, ದೇವದೂತನ ಸ್ವರವು ಮತ್ತು ದೇವರ ತುತ್ತೂರಿ ಶಬ್ಧವು ಕೇಳಿಸುವದು, ಯಾರೂ ಆತನ ಬರೋಣವನ್ನು ತಪ್ಪಿಸಿಕೊಳ್ಳದಂತೆ, ಯೇಸುವಿನ ಪುನರಾಗಮನದ ಸುದ್ಧಿ ಯನ್ನು ದೊಡ್ಡ ಶಬ್ಧದಿಂದ ಪ್ರಕಟಿಸಲಾಗುವದು - ಜೀವಿ ಸುವವರೂ ಮತ್ತು ಸತ್ತವರೂ ಸಹ ಕೇಳಿಸಿಕೊಳ್ಳುವರು. ಕೆಲವು ಧಾರ್ಮಿಕ ಜನರು ಯೇಸುವಿನ ಆಗಮನವು ನಿರ್ದಿಷ್ಟವಾಗದೆ ಇರುವದರಿಂದ, ಯೇಸು ರಹಸ್ಯವಾಗಿ ಬರುವನು ಎಂದು ಪ್ರತಿಪಾದಿಸುತ್ತಾರೆ. ಇದು ದೇವರ ವಾಕ್ಯದ ಬೋಧನೆಯಲ್ಲ. ಯೇಸುವಿನ ಆಗಮನವು ಪ್ರತಿಯೊಬ್ಬರಿಗೂ ಸಹಜವಾಗಿರುತ್ತದೆ. ದೇವರ ಶಕ್ತಿಯು ಭೂಮಂಡಲವನ್ನು ಹತೋಟಿಯಲ್ಲಿಡುತ್ತದೆ, "ಆತನ ಮಾರ್ಗಗಳು ಅದ್ಭುತ; ..." (ಯೋಬ 26:14) ಎಂದು ತಿಳಿಸಲಾಗಿದೆ! ಯೇಸುವಿನ ಆಗಮನದ ಸಂದೇಶವನ್ನು ಜನರು ದೇವರಿಂದ ಸರಳವಾಗಿ ಪಡೆಯುವರು.

ಮೂರನೆಯದಾಗಿ, ಸತ್ತವರು ಪುನರುತ್ಥಾನ ಹೊಂದುವರು, ಮೊದಲ ಶತಮಾನದ ಅಪೊಸ್ತಲರ ಪ್ರಸಂಗದಲ್ಲಿ ಇದು ಮುಖ್ಯ ಪ್ರಸ್ತಾಪವಾಗಿತ್ತು. ಅಪೊಸ್ತಲರ ಕೃತ್ಯಗಳು 4:33ರಲ್ಲಿ, "ಕರ್ತನಾದ ಯೇಸು ಜೀವಂತನಾಗಿ ಎದ್ದು ಬಂದವನೆಂಬುದಕ್ಕೆ ಅಪೊಸ್ತಲರು ಬಹು ಬಲ ವಾಗಿ ಸಾಕ್ಷಿ ಹೇಳುತ್ತಿದ್ದರು, ..." ಅದು ಯೇಸುವಿನ ದೈವೀಕತ್ವದ ಕುರುಹು ಆಗಿತ್ತು. ದೇವರು ಮಾತ್ರ ಯೇಸುವನ್ನು ಮರಣದಿಂದ ಎಬ್ಬಿಸಿದ್ದನು. ಯೇಸುವನ್ನು "ಸತ್ತ ಮೇಲೆ ಜೀವಿತನಾಗಿ

ಎದ್ದು ಬಂದ ಮಹತ್ಕಾರ್ಯದಿಂದ ದೇವಕುಮಾರನೆಂದು ನಿರ್ಣಯಿಸಲ್ಪಟ್ಟವನು ಆಗಿದ್ದಾನೆ" (ರೋಮಾಪುರ 1:4). ಯೇಸುವಿನ ಪುನರುತ್ಥಾನದ ನಿಮಿತ್ತ, ಕ್ರೈಸ್ತರಾದವರು ಮರಣದ ನಂತರದ ಜೀವಿತದಲ್ಲೂ ಮತ್ತು ಆತನ ಪುನರುತ್ಥಾನದಲ್ಲೂ ಪಾಲು ತೆಗೆದುಕೊಳ್ಳಲು ಆಸ್ಪದವಾಗುತ್ತದೆ. "ಇದುವರೆಗೆ ಗುಪ್ತವಾಗಿದ್ದ ಸಂಗತಿಯನ್ನು ನಿಮಗೆ ತಿಳಿಸುತ್ತೇನೆ - ನಾವೆಲ್ಲರೂ ನಿದ್ರೆ ಹೋಗುವದಿಲ್ಲ: ಆದರೆ ಕಡೇ ತುತೂರಿಯ ಧ್ವನಿಯಾಗುವಾಗ ನಾವೆಲ್ಲರು ಒಂದು ಕ್ಷಣದಲ್ಲೇ ರೆಪ್ಪೆ ಬಡಿಯವಷ್ಟರೊಳಗಾಗಿ ಮಾರ್ಪಡುವೆವು, ತುತೂರಿಯು ಉದಲಾಗಿ ಸತ್ತವರು ನಿರ್ಲಯರಾಗಿ ಎಬ್ಬಿಸಲ್ಪಡುವರು, ನಾವು ಮಾರ್ಪಡುವೆವು" (1 ಕೊರಿಂಥ 15:51, 52). ಅಂತಿಮವಾದ ಸೇರುವಿಕೆಯಲ್ಲಿ ಕ್ರಿಸ್ತನಲ್ಲಿ ಏಳುವವರು ನಿರ್ಲಯತ್ವವನ್ನು ಪಡೆಯುವರು ಎಂಬುದು ಪ್ರಥಮ ಭಾಗವಾಗಿದೆ. ಮತ್ತು ಯೇಸುವಿನಲ್ಲಿ ನಿತ್ಯತ್ವವನ್ನು ಆನಂದಿಸುವರು.

## ಜೀವಿಸುವವರು ಮತ್ತು ಎಬ್ಬಿಸಲ್ಪಟ್ಟವರು ಪುನಃ ಸೇರುವರು, ಆದ್ದರಿಂದ ದುಃಖಿಸಬೇಡಿ (4:17)

ಕ್ರಿಸ್ತನಲ್ಲಿ ಮರಣಹೊಂದಿರುವವರ ಕುರಿತ ಚಿಂತನೆಯ ಬಳಿಕ ದೇವರು ಜೀವಿಸುತ್ತಿರುವವರ ಬಗ್ಗೆ ಯೋಚಿಸಿ, ಅವರೂ ಸಹ ದೇವಜನರ ಒಡಗೂಡಿ ಯೇಸುವಿನ ಸಂಗಡ ನಿತ್ಯತ್ವದಲ್ಲಿರುವರು (4:17). ಈ ವಚನವು, "ಅಂತರಿಕ್ಷದಲ್ಲಿ" ಒಂದಾಗುವ ಕುರಿತು ತಿಳಿಸುತ್ತದೆ. ಯೇಸು ರಹಸ್ಯವಾಗಿ ಒಂದು ಭೂಮಿಯಲ್ಲಿ ಕಾಣಿಸಿಕೊಳ್ಳು ವನು ಎಂಬ ತಪ್ಪಾದ ಬೋಧನೆಗೆ ವಿರುದ್ಧವಾಗಿರುತ್ತದೆ. ಯೇಸು ಭೂಮಿಯಲ್ಲಿ ತನ್ನ ರಾಜ್ಯವನ್ನು ಸ್ಥಾಪಿಸಲು ಬರುವನು ಎಂಬ ವಿಷಯಕ್ಕೂ ತದ್ವಿರುದ್ಧವಾಗಿರುತ್ತದೆ. ತನ್ನ ಜನರು ಈ ಭೂಮಿಯಲ್ಲಿ ನಿತ್ಯವಾಗಿ ಇರುವರು ಎಂಬ ಯೋಜನೆಯನ್ನು ದೇವರು ಮಾಡಿರುವದಿಲ್ಲ. ತನ್ನ ಜನರು ಈ ಭೂಮಿಯಲ್ಲಿ ನಿತ್ಯವಾಗಿ ಇರುವರು ಎಂಬ ಯೋಜನೆಯನ್ನು ದೇವರು ಮಾಡಿರುವದಿಲ್ಲ.

"ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಲಯವಾಗಿ ಹೋಗುವವು," ಮತ್ತು "ಭೂಮಿಯೂ ಅದರಲ್ಲಿರುವ ಕೆಲಸಗಳೂ ಸುಟ್ಟು ಹೋಗುವವು" (2 ಪೇತ್ರ 3:10ಬಿ, ಡಿ) ಎಂಬುದನ್ನು ಅರಿಯೋಣ. ನಾವು ಈ ಭೂಮಿಯಲ್ಲಿಯೇ ತಳ ಊರುವದಿಲ್ಲ, ಯಾಕೆಂದರೆ, "ನಾವು ಪರಲೋಕದ ಸಂಸ್ಥಾನದವರಾಗಿದ್ದೇವೆ. ಕರ್ತನಾದ ಯೇಸು ಕ್ರಿಸ್ತನು ಅಲ್ಲಿಂದಲೇ ರಕ್ಷಕನಾಗಿ ಬರುವದನ್ನು ಎದರು ನೋಡುತ್ತಾ ಇದ್ದೇವೆ" (ಫಿಲಿಪ್ಪಿ 3:20). ಯೇಸುವಿನ ಬರೋಣದಲ್ಲಿ ದೇವರು ನಮಗೆ ಹೊಸದಾದ ನಿತ್ಯ ಮನೆಯನ್ನು ನೀಡುವನು ಎಂಬ ಯೋಜನೆಯನ್ನು ಹೊಂದಿರುವೆವು. ಪೇತ್ರನು ಹೇಳಿದಂತೆ, "ಆದರೆ ನಾವು ದೇವರ ವಾಗ್ದಾನವನ್ನು ನಂಬಿ ನೂತನಾಕಾಶಮಂಡಲವನ್ನು ನೂತನ ಭೂಮಂಡಲವನ್ನೂ ಎದುರು ನೋಡುತ್ತಾ ಇದ್ದೇವೆ; ಅವುಗಳಲ್ಲಿ ನೀತಿಯು ವಾಸವಾಗಿರುವದು" (2 ಪೇತ್ರ 3:13).

## ದುಃಖಿಸದೆ ನಿಮ್ಮ ಸಹೋದರರನ್ನು ಸಂತೈಸಿರಿ (4:18)

ಮರಣ ಹೊಂದಿದ ಸಹೋದರರ ಭವಿಷ್ಯದ ಕುರಿತು ಥೆಸಲೊನೀಕ ಕ್ರೈಸ್ತರು ಚಿಂತನೆಯನ್ನು ಹೊಂದಿದ್ದರು. ಈಗ ಅವರಿಗೆ ನಿಜ ಸ್ಥಿತಿಯು ತಿಳಿದಿದ್ದು, ಮರಣ ಹೊಂದಿದವರಿಗಾಗಿ ವೇದನೆ ಪಡದೆ, ಮತ್ತು ಯೇಸುವಿನ ಆಗಮನದಲ್ಲಿ ಅವರು ಪಾಲುಗಾರರಾಗುವದಿಲ್ಲ ಎಂದು ಚಿಂತಿಸಲಿಲ್ಲ. ಅವರೆಲ್ಲರೂ ಇವರೊಂದಿಗೆ ಪುನಃ ಸೇರುವರು ಅವರೊಂದಿಗೆ ನಿತ್ಯತ್ವದ ಆನಂದವನ್ನು ಹೊಂದುವರು ಎಂದು ತಿಳಿದರು (4:18).

ಕ್ರೈಸ್ತರು ಮಾತ್ರ ಮರಣದ ನಂತರದ ನಿರೀಕ್ಷೆಯನ್ನು ಹೊಂದಿರುವರು. ಕ್ರಿಸ್ತನ ಅನುಯಾಯಿಗಳಾಗಿ, ಮತ್ತು ಪುನರುತ್ಥಾನದಲ್ಲಿ ನಂಬಿಕೆ ಇಟ್ಟವರಾಗಿ, ಮರಣದ ಕುರಿತಾಗಿ ಯೋಚಿಸುವ ಕ್ರೈಸ್ತರನ್ನು ಸಂತೈಸೋಣ.

## ಮುಕ್ತಾಯ

ಯೇಸುವಿನ ಸತ್ಯದ ಕುರಿತಾದ ಪ್ರಕಟನೆಯು, ಹಾಗೂ ಆತನ ಬರೋಣವು ದೇವರ ನೀತಿಯಲ್ಲಿರುವವರಿಗೆ ಸುರಕ್ಷೆ ಹಾಗೂ ಸಂತೈಸುವಿಕೆಯನ್ನು ನೀಡುತ್ತದೆ. ಈ ಕ್ರೈಸ್ತರು ಅನುಭವಿಸಿದಂಥ ವೇದನೆ ಮತ್ತು ಬೇಸರವು ಕ್ರೈಸ್ತ ಜೀವಿತಕ್ಕೆ ಉಂಟಾಗುತ್ತದೆ. ಆದರೆ ಯೇಸುವಿನ ಬರೋಣದಲ್ಲಿ, ಸಕಲ ವೇದನೆಯು ಅಂತ್ಯವಾಗುತ್ತದೆ.

ನಮ್ಮ ಕುರಿತಾಗಿ ಏನು? ಕರ್ತನ ಬರುವಿಕೆಯು ನಮ್ಮ ವೇದನೆಯನ್ನು ಅಂತ್ಯಗೊಳಿಸುವುದೇ? "ಕರ್ತನಲ್ಲಿ ಭಕ್ತರಾಗಿ ಸಾಯುವವರು ಧನ್ಯರು, ಎಂಬ ದೇವರ ಸಂದೇಶವಿದೆ. ಹೌದು ಅವರು ಧನ್ಯರೇ, ಅವರ ಕಷ್ಟ ತೀರಿತು, ಅವರಿಗೆ ವಿಶ್ರಾಂತಿಯಾಗುವದು, ಅವರ ಸುಕೃತ್ಯಗಳು ಅವರೊಡನೆ ಬರುವವು" (ಪ್ರಕಟನೆ 14:13). ಯೇಸುವಿನ ಬರೋಣ ಅಥವಾ ನಿಮ್ಮ ಮರಣ ಬರುವದರೊಳಗಾಗಿ ಜೀವಿಸಿರಿ, ಅದು ನಿಮಗೆ ವಿಶ್ರಾಂತಿ ಹಾಗೂ ಶಾಂತಿಯನ್ನು ನೀಡುವದು! ಈ ಆಲೋಚನೆಯಲ್ಲಿ ಜೀವಿಸಿರಿ, ಅದು ನಿಮ್ಮ ಸಹೋದರರ ದುಃಖದ ಸಮಯದಲ್ಲಿ ಸಂತೈಸುವುದು!